

ಒಂದೂರಲ್ಲಿ ಒಬ್ಬ ರಾಜ ಇದ್ದ. ಆ ಊರಲ್ಲಿ ರಾಜಂದು ಒಬ್ಬನದೇ ಮಹಡಿ ಮನೆ. ಅವನು ತನ್ನ ಮಹಡಿ ಮನೇಲಿ ನಿಂತು ತಾನು ಎಲ್ಲರಿಗಿಂತ ಮೇಲಿರುವೆ ಎಂದು ಮೀಸೆ ತಿರುವಿಕೊಳ್ತಿದ್ದ. ಒಂದಿನ ಹಾಗೇ ಆ ಊರಿನ ಪಕ್ಕದಲ್ಲಿರುವ ಬೆಟ್ಟದ ಕಡೆಗೆ ನೋಡಿದ. ಅದರ ಮೇಲಿರುವ ಮರದಲ್ಲಿ ಒಂದು ಕೋತಿ ರೆಂಬೇನ ಜೋರಾಗಿ ಅಲ್ಲಾಡಿಸುತ್ತಾ ಕಿರುಚುತ್ತಲಿತ್ತು. ರಾಜನಿಗೆ ಸಿಟ್ಟು ಬಂತು.

'ಎಲಾ ಕೋತಿ... ನೀನು ನಂಗಿಂತ ಮೇಲಿದೀಯಾ? ಇರು, ಮಾಡ್ತೀನಿ' ಎಂದುಕೊಂಡು ಅವತ್ತೇ ತನ್ನ ಮನೇನ ಬೆಟ್ಟದ ಮೇಲಕ್ಕೆ ಸಾಗಿಸಿ, ಸುತ್ತಲೂ ಕೋಟೆ ಕಟ್ಟಿಕೊಂಡು ನಗತೊಡಗಿದ. ಅವನು ಶಂಖ ಊದಿದರೆ, ಗಂಟೆ ಬಾರಿಸಿದರೆ ಕೆಳಗಿರುವ ಜನ,

'ಓ ದೇವ್ರು' ಎಂದು ಕೈ ಮುಗಿಯೋರು. ಅವನು ಮತ್ತೆ ಜೋರಾಗಿ ನಗುತ್ತಲಿದ್ದ...

'ಮತ್ತೆ ಆ ರಾಜ ಕೋತಿಗಳ್ನ ಏನ್ ಮಾಡ್ದ ಶಂಕರಣ್ಣ...'

'ಓ... ಮರ್ತೆಬಿಟ್ಟೆ ನೋಡು ಭಾಸ್ಕರ. ಆ ರಾಜ ಆ ಕೋತಿಗಳ್ಗೆ ಬಾಳೆಹಣ್ಣು, ಬಿಸ್ಕತ್ತು ಕೊಟ್ಟು ಕೋಟೆ ಕಾಯಲು ಬಿಟ್ಟ. ಅವು ಯಾರಾದ್ರು ಶತ್ರುಗಳು ಬಂದ್ರೆ ಜೋರಾಗಿ ರೆಂಬೆಗಳ್ನ ಅಲ್ಲಾಡಿಸಿ ಕೂಗೋವು. ರಾಜ, ಕತ್ತಿ ಕೋವಿ ಹಿಡಿದ ತಂಡಾನ ಕೆಳಗೆ ಕಳಿಸೋನು. ಯುದ್ಧ ನಡೆಯೋದು...'

'ಯುದ್ಧಾನೆ? ಅಂದ್ರೆ ಜಾಸ್ತಿ ಜನಾ ಸಾಯೋರು. ಯುದ್ಧ ಅಂದ್ರೆ ಅದೇ ಅಲ್ವ?'

'ಹಾ, ಹೌದು ಭಾಸ್ಕರ.'

'ಮತ್ತೆ ರಾಜ ಏನ್ ಮಾಡೋನು?'

'ಬೆಟ್ಟದ ಮೇಲೆ ನಿಂತ್ಕಂಡು ಯುದ್ಧ ನೋಡೋನು.'

'ಓ... ನಾನು ಮೊಬೈಲಲ್ಲಿ ಆಡ್ತೀನಲ್ಲ ಗೇಮು, ಆ ಥರಾನ? ಆಗ ಮೊಬೈಲು ಇರ್ಲಿಲ್ಲ ಅಲ್ವ... ಅದ್ಕೆ' ಎಂದು ನುಡಿದ ಭಾಸ್ಕರ ನಗುತ್ತಾ ಶಂಕರನ ಕಡೆಗೆ ನೋಡಿದ. ಶಂಕರನಿಗೆ ಭಾಸ್ಕರನ ಮುಗ್ಧತೆ ಇಷ್ಟ ಆಯ್ತು. ತಲೆ ಸವರಿದ. ನಂತರ 'ಇರು ನಿನ್ನ ಮೇಲೆ ಪದ್ಯ ಹೇಳ್ತೀನಿ' ಎನ್ನುತ್ತಾ ಸ್ವಲ್ಪ ಗಂಟಲನ್ನು ಸರಿಪಡಿಸಿಕೊಂಡು ಯೋಚಿಸಿದ. ನಂತರ'

**'ಎಂತ ಚಂದ ನಮ್ಮ ಈ ತುಂಟ ಭಾಸ್ಕರ**
**ಬುಕ್ಕು ಸಿಗಲು ಕೈಲಿ ಹಿಡಿದು ಹರೀತಾನೆ ಪರಪರ**
**ಮೊಬೈಲು ಸಿಗಲು ಇವನ ಮುಖ ತುಂಬು ಚಂದಿರ**
**ಕಣ್ಣು ಬೆರಳು ಕೂಡುತಾವೆ ಇವನದೆಂತ ಸಡಗರ'**

ಎಂದು ಹಾಡುವ ಧಾಟಿಯಲ್ಲೆ ನುಡಿದು, 'ಹಾ ಚಂದ ಇದೆಯಲ್ಲ' ಎಂದು ಚಪ್ಪಾಳೆ ತಟ್ಟಿದ. ಭಾಸ್ಕರ ಮುಖ ಊದಿಸಿಕೊಂಡು, 'ಹೋಗಣ್ಣ... ನೀ ಬರೀ ಸುಳ್ಳು ಹೇಳ್ತೀಯ. ನಾನ್ಯಾವಾಗ ಬುಕ್ಕು ಹರೀತೀನಿ. ನಮ್ಮಪ್ಪ ಕೇಳಿಸ್ಕೊಂಡ್ರೆ ನಿಜ ಅನ್ಕೊಂಡು ಹೊಡೀತಾನಷ್ಟೆ' ಎಂದು ನುಡಿದು ಎದ್ದು ನಿಂತ. ಶಂಕರ 'ಹಾಗಲ್ವೊ ಭಾಸ್ಕರ. ನಿಮಗೆ ಬುಕ್ಕಿನ ಅವಶ್ಯಕತೆ ಇಲ್ಲ ನೋಡು. ಮೊಬೈಲು, ಲ್ಯಾಪ್ಟಾಪು ಇದ್ರೆ ಸಾಕಲ್ವ... ಪೇಪರ್ ಲೆಸ್ಸು. ಆ ಅರ್ಥದಲ್ಲಿ ಹೇಳಿದ್ದು' ಎಂದು ನುಡಿದು ಪಕ್ಕದಲ್ಲಿರುವ ಪುಸ್ತಕವನ್ನು ಓದಲೆಂದು ಕೈಗೆ ತಗೊಂಡ. ಭಾಸ್ಕರ 'ಅಣ್ಣೋ, ಈ ಪದ್ಯ ಬರೆಯೋದ್ರಿಂದ ಏನ್ ಸಿಗುತ್ತೆ? ಹೊಟ್ಟೆ ತುಂಬುತ್ತಾ?' ಎಂದು ನುಡಿದು ನಿಂತೇ ಇದ್ದ.

ಶಂಕರ ಭಾಸ್ಕರನ ಕಡೆಗೆ ನೋಡಿದ. ಅವನ ಕಂಗಳು ಹೊಳೆಯುತ್ತಿದ್ದವು. ಮುಖ ತುಂಬು ಚಂದಿರನಂತೆಯೆ ಕಂಡಿತು. ಹಾಗೆ ನೋಡುತ್ತಲೇ 'ಇಲ್ಲಾ ಭಾಸ್ಕರ, ಮುದ್ದೆ ತಿಂದ್ರೇನೆ ಹೊಟ್ಟೆ ತುಂಬೋದು' ಎಂದು ನುಡಿದು ಕೈಲಿರುವ ಪುಸ್ತಕದ ಪುಟ ತಿರುವಿದ. ಭಾಸ್ಕರ ಆಚೆ ನಡೆದ.